CW.3      PW.2

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1047/2021

| | |
|---|---|
| ಸಾಕ್ಷಿದಾರರ ಹೆಸರು | ರಘು |
| ತಂದೆಯ ಹೆಸರು | ಮುನಿಮಾರೇಗೌಡ |
| ವಯಸ್ಸು | 33 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ಹೊಸದುರ್ಗ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 13.03.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1, 2 ರವರು ಗೊತ್ತಿರುತ್ತಾರೆ. ಉಳಿದವರು ಗೊತ್ತಿರುವುದಿಲ್ಲ.

ಸುಮಾರು 3-4 ವರ್ಷಗಳ ಹಿಂದೆ ಒಂದು ಅಪಘಾತವಾಗಿದೆ ಎಂದು ತಿಳಿಸಿ ಪೋಲೀಸರು ನನ್ನ ಬಳಿ ಒಂದು ದಾಖಲೆಗೆ ಸಹಿ ಪಡೆದಿರುತ್ತಾರೆ. ಆಗ ಸಂಜೆ ಸಮಯವಾಗಿತ್ತು. ನಾನು ಸದರಿ ದಾಖಲೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನನ್ನ ಜೊತೆ ಆ ದಿನ ಚಾಸಾ-2 ರವರು ಹಾಜರಿದ್ದರು. ನನ್ನ ಮುಂದೆ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ. ದಾಖಲೆಯಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಕೇವಲ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಸ್ಥಳ ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಸ. ಸ. ಅ. ರವರಿಂದ**

ದಿನಾಂಕ 03.11.2019 ರಲ್ಲಿ ಪೋಲೀಸರು ಸಂಜೆ 5.30 ರಿಂದ 6.30 ಗಂಟೆಯವರೆಗೂ ವೆಂಕಟೇಶ್ವರ ಕನ್ವೇಷನ್ ಹಾಲ್ ಮುಂದಿನ ಕನಕಪುರ-ಬೆಂಗಳೂರು ಹೆದ್ದಾರಿ ರಸ್ತೆಯಲ್ಲಿ ಮಹಜರ್ ತಯಾರು ಮಾಡಿರುತ್ತಾರೆಂದರೆ ಸರಿ. ಆ ದಿನ ನನ್ನ ಜೊತೆ ಚಾಸಾ-1 ರವರು ಕೂಡ ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಹಜರ್ ನ್ನು ಚಾಸಾ-1 ರವರು ಹೇಳಿದಂತೆ ಪೋಲೀಸರು ತಯಾರು ಮಾಡಿ ನಂತರ ನನಗೆ ಹಾಗೂ ಚಾಸಾ-2 ರವರಿಗೆ ವಿಷಯ ತಿಳಿಸಿ ನಮ್ಮಗಳ ಸಹಿ ಪಡೆದಿರುತ್ತಾರೆಂದರೆ ಸರಿ ಸ್ಥಳದಲ್ಲಿ 1 ವಾಹನವಾದ ಕೆಎ-01-ಎಂಸಿ-2131 ಅಮಾನತು ಪಡಿಸಿಕೊಂಡಿರುತ್ತಾರೆಂದರೆ ನನಗೆ ನೆನಪಿಲ್ಲ. ನಾನು ಠಾಣೆಗೆ ಹೋದಾಗ ಪೋಲೀಸರು ನನ್ನ ಬಳಿ ದಾಖಲೆಗೆ ಸಹಿ ಪಡೆದಿದ್ದಾರೆಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ವಿಚಾರಣೆಯನ್ನು ಮುಂದೂಡಲಾಯಿತು.**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**